**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>**
**<u>ಸಿ.ಸಿ.512/2024</u>**

| | | |
|---|---|---|
| ಸಾಕ್ಷಿದಾರರ ಹೆಸರು | : ಶಂಕರ್ | ಫ್ರಾಸಾ-3 |
| ತಂದೆಯ ಹೆಸರು | : ಹೊನ್ನಯ್ಯ | ಚಾಸಾ-2 |
| ವಯಸ್ಸು | : 45 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಆಟೋ ಚಾಲಕ | ದಿನಾಂಕಃ10.11.2025 |
| ವಾಸಸ್ಥಳ | : ಕಾರ್ಮಕ್ಕಿ | |

**<u>:ಮುಖ್ಯ ವಿಚಾರಣೆ: ಫ್ರಾಜ್ಞ್ಯಾ.ಸ.ಸ.ಅ. ರವರಿಂದ:</u>**

ಚಾಸಾ-1, 2, 4 ಮತ್ತು 5 ರವರ ಪರಿಚಯ ನನಗಿದೆ. ಅವರು ನಮ್ಮ ಊರಿನವರು.

ಸಾಕ್ಷಿಯು ನಿಪಿ-2 ರ ಮಹಜರ್ ನಲ್ಲಿ ತಮ್ಮ ಸಹಿಯನ್ನು ಗುರುತಿಸಿ, ನಿಪಿ-3 ಮತ್ತು 4 ರ ಪೋಟೋಗಳಲ್ಲಿ ತಾವು ಇರುವ ಬಗ್ಗೆ  ಗುರುತಿಸುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

ದಿ.18.06.2023 ರಂದು ಪೋಲಿಸರು ನನ್ನನ್ನು ಬಿದರಹಳ್ಳಿ ಮತ್ತು ಮುಗ್ಗರಹಳ್ಳಿ ಮಧ್ಯದ ರಸ್ತೆಯಲ್ಲಿ ಮಹಜರ್ ಗೆಂದು ಕರೆದು ಚಾಸಾ-1 ರವರು ಆರೋಪಿ ತನ್ನ ಕಾರಿನಲ್ಲಿ ರಾಂಗ್ ಸೈಡ್ ನಿಂದ ಬಂದು ತಮಗೆ ಅಪಘಾತಪಡಿಸಿದ ಜಾಗ ಇದೆ ಎಂದು ನನ್ನ ಸಮಕ್ಷಮ ತೋರಿಸಿದ್ದು, ಪೋಲಿಸರು ನನ್ನ ಸಮಕ್ಷಮ ಮಹಜರ್ ಮಾಡಿ ಪೋಟೋ ತೆಗೆದಿದ್ದರು. ಆ ಸಮಯಕ್ಕೆ ನನ್ನೊಂದಿಗೆ ಚಾಸಾ-3 ರವರು ಸಹಾ ಹಾಜರಿದ್ದರು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಫ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**<u>ಪಾಟೀ ಸವಾಲು: ಫ್ರಾಜ್ಞ್ಯಾ.ಸ.ಸ.ಅ. ರವರಿಂದ:</u>**

ನಾನು ಮೇಲೆ ಹೇಳಿದಂತೆ ಸ್ಥಳ ಮಹಜರ್ ನ್ನು ದಿ.23.09.2023 ರಂದು ಬೆ.11.30 ರಿಂದ 12.30 ರವರೆಗೂ ಬರೆದು ಪೋಟೋ ತೆಗೆದಿದ್ದಾರೆ ಎಂದರೆ ಸರಿ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಡಿ.ಕೆ.ಪಿ. ವಕೀಲರಿಂದಃ</u>**

ನಾನು ಹೇಳಿದ ದಿನಾಂಕದಂದು ಪೋಲಿಸರು ನನಗೆ ನೋಟೀಸು ಕೊಟ್ಟಿದ್ದರು. ಮಹಜರ್ ಗೂ ಎರಡು ದಿನದ ಮುಂಚೆ ಆ ನೋಟೀಸು ಕೊಟ್ಟಿದ್ದರು. ನನಗೆ ನೋಟೀಸು ಕೊಟ್ಟ ದಿನಾಂಕ ನನಗೆ ನೆನಪಿಲ್ಲ. ನಾನು ಸ್ಥಳಕ್ಕೆ ಹೋದಾಗ ಅಲ್ಲಿ ಜನರು ಇರಲಿಲ್ಲ. ಆದರೆ ಆರೋಪಿ ಇದ್ದರು. ಮಹಜರ್ ನ್ನು ಪೋಲಿಸರು ಬರೆದಿದ್ದು, ಅವರ ಹೆಸರು ನನಗೆ ಗೊತ್ತಿಲ್ಲ. ನಿಪಿ-2 ಕ್ಕೆ ನಾನು ಮೂಡಿಗೆರೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ನನ್ನ ಸ್ನೇಹಿತರಲ್ಲ, ಆದರೆ ಅವರು

ನಮ್ಮ ಊರಿನವರು. ಆರೋಪಿ ಚಿಕ್ಕಮಗಳೂರಿನ ವಾಸಿ ಎಂದರೆ ಸರಿ. ಚಾಸಾ-1 ರವರು ನಮ್ಮ ಊರಿನವರಾದ ಕಾರಣ ನಿಪಿ-2 ಕ್ಕೆ ನಾನು ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿದ್ದರೂ ಸಹಾ ಸ್ಥಳದಲ್ಲಿ ಸಹಿ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರ ತಪ್ಪಿನಿಂದಲೇ ಅಪಘಾತವಾಗಿತ್ತು ಎಂದರೆ ಸರಿಯಲ್ಲ. ನಿಪಿ-3 ಮತ್ತು 4 ಅಪಘಾತ ಸ್ಥಳದ ಪೋಟೋವಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.